# National
# Kannada
# 21.05.2017/13.10 hrs

ಆಕಾಶವಾಣಿ: ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು:</u>

- ಸರಕು ಮತ್ತು ಸೇವಾ ತೆರಿಗೆ– ಜಿಎಸ್‌ಟಿ ಜಾರಿಯಿಂದ ಹಣದುಬ್ಬರ ಶೇಕಡ 2% ರಷ್ಟು ಇಳಿಕೆಯಾಗಲಿದೆ– ಆದಾಯ ತೆರಿಗೆ ಇಲಾಖೆ ಕಾರ್ಯದರ್ಶಿ ಹಸ್ಮುಕ್ ಅದಿಯಾ.

- ಜಮ್ಮು–ಕಾಶ್ಮೀರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಅಡಚಣೆ ಉಂಟು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ಕಾಶ್ಮೀರದ ಮೂವರು ಪ್ರತ್ಯೇಕವಾದಿಗಳ ವಿಚಾರಣೆ.

- ಪನಮಾ ದಾಖಲೆಗಳ ವಿವಾದದಿಂದಾಗಿ ಪಾಕಿಸ್ತಾನದಲ್ಲಿ ರಾಜಕೀಯ ಅಪಾಯ ಉಂಟಾಗಲಿದ್ದು, ಕೆಲ ನೀತಿಗಳ ಅನಿಶ್ಚತತೆ ಎದುರಾಗಲಿದೆ– ಪಾಕಿಸ್ತಾನಕ್ಕೆ ವಿಶ್ವಬ್ಯಾಂಕ್ ಎಚ್ಚರಿಕೆ.

- ಫೆಡರೇಷನ್ ಫುಟ್‌ಬಾಲ್ ಪಂದ್ಯಾವಳಿ; ಕಟಕ್‌ನಲ್ಲಿಂದು ನಡೆಯಲಿರುವ ಫೈನಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಹಾಲಿ ಚಾಂಪಿಯನ್ ಮೋಹನ್ ಬಾಗನ್ ಮುಖಾಮುಖಿ.

- ಐಪಿಎಲ್ ಟ್ವೆಂಟಿ–20 ಕ್ರಿಕೆಟ್: ಹೈದರಾಬಾದ್‌ನಲ್ಲಿಂದು ನಡೆಯಲಿರುವ ಫೈನಲ್ ಪಂದ್ಯದಲ್ಲಿ 2 ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ರೈಸಿಂಗ್ ಪುಣೆ ಸೂಪರ್ ಜಯಿಂಟ್ಸ್ ಹಣಾಹಣಿ.

****************

ಸರಕು ಮತ್ತು ಸೇವಾ ತೆರಿಗೆ – ಜಿಎಸ್‌ಟಿ ಜಾರಿಯಿಂದ ಹಣದುಬ್ಬರ ಶೇಕಡಾ ಎರಡರಷ್ಟು ಇಳಿಕೆಯಾಗಲಿದ್ದು ಆರ್ಥಿಕತೆ ಚೇತರಿಸಿಕೊಳ್ಳಲಿದೆ ಎಂದು ಆದಾಯ ತೆರಿಗೆ ಇಲಾಖಾ ಕಾರ್ಯದರ್ಶಿ ಹಸ್‌ಮುಖ್ ಅಧಿಯಾ ತಿಳಿಸಿದ್ದಾರೆ. ಪ್ರಾರಂಭದಲ್ಲಿ ಹಣದುಬ್ಬರ ಏರಿಕೆಯಾಗಬಹುದಾದರೂ ಸರ್ಕಾರ ಇದನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಹೇಳಿದ್ದಾರೆ.

ಜಿಎಸ್‌ಟಿ ಸಮಿತಿ ಮುಂದಿನ ವಾರ ಸಭೆ ನಡೆಸಲಿದ್ದು, ಕೆಲವು ವಸ್ತುಗಳ ಮೇಲಿನ ತೆರಿಗೆ ದರವನ್ನು ನಿರ್ಧರಿಸಲಿದೆ ಎಂದು ಅವರಯ ಪಿಟಿಐ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ವಾಹನ ಮತ್ತು ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆಗಳು ಆದಾಯ ನಷ್ಟವನ್ನು ಸರಿದೂಗಿಸಲಿದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಜಿಎಸ್‌ಟಿ ಕುರಿತಂತೆ ಬೃಹತ್ ಪ್ರಮಾಣದಲ್ಲಿ ಜಾಗೃತಿ ಮೂಡಿಸಲು ವೇದಿಕೆ ಸಜ್ಜುಗೊಳಿಸಲಾಗಿದೆ.

****************

ಜಮ್ಮು–ಕಾಶ್ಮೀರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಅಡಚಣೆ ಉಂಟುಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಶ್ಮೀರದ ಮೂವರು ಪ್ರತ್ಯೇಕತಾವಾದಿಗಳನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ ಎನ್‌ಐಎ ವಿಚಾರಣೆ ನಡೆಸಿದೆ.

ರಾಜ್ಯದಲ್ಲಿ ಹಿಂಸಾಚಾರ ನಡೆಸಲು ಪಾಕಿಸ್ತಾನದಿಂದ ಹಣ ಪಡೆದ ಬಗ್ಗೆ ಟಿವಿ ವಾಹಿನಿಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಆರೋಪಿಗಳಾದ ನಯೀಂ ಖಾನ್, ಫಾರೂಖ್ ಅಹ್ಮದ್‌ದಾರ್ ಮತ್ತು ಗಾಝೀ ಜಾವೇದ್ ಬಾಬಾ ಅವರನ್ನು ವಿಚಾರಣೆಗೆ ಹಾಜರಾಗುವಂತೆ ಎನ್‌ಐಎ ಸೂಚಿಸಿತ್ತು.

ಪ್ರಾಥಮಿಕ ವಿಚಾರಣೆ ಸಂದರ್ಭದಲ್ಲಿ ಈ ಮೂವರು ಲಷ್ಕರ್ ಎ ತೋಯ್ಬಾ ನಾಯಕ ಹಫೀಜ್ ಸಯೀದ್‌ನಿಂದ ಹಣ ಪಡೆದಿದ್ದಾರೆ ಎಂದು ಎನ್‌ಐಎ ತಿಳಿಸಿದೆ.

ಕಾಶ್ಮೀರದಲ್ಲಿ ರಕ್ಷಣಾ ಸಿಬ್ಬಂದಿ ಮೇಲೆ ಕಲ್ಲು ತೂರಾಟ, ಸಾರ್ವಜನಿಕ ಆಸ್ತಿ ಧ್ವಂಸ, ಶಾಲಾ ಕಟ್ಟಡಗಳಿಗೆ ಅಗ್ನಿಸ್ಪರ್ಶ, ಸರ್ಕಾರಿ ಸಂಸ್ಥೆಗಳ ಮೇಲೆ ದಾಳಿ ಮುಂತಾದ ಚಟುವಟಿಕೆಗಳಲ್ಲಿ ಈ ಮೂವರು ತೊಡಗಿದ್ದಾರೆ ಎಂದು ಆರೋಪಿಸಲಾಗಿದೆ.

ರಾಜ್ಯದಲ್ಲಿ ಹಿಂಸಾಚಾರ ಚಟುವಟಿಕೆಗೆ ಸಂಬಂಧಿಸಿದಂತೆ ಲಷ್ಕರ್–ಎ ತೊಯ್ಬಾ ಮುಖ್ಯಸ್ಥ ಹಫೀಸ್ ಸಯೀದ್ ಮತ್ತು ಹುರಿಯತ್ ನಾಯಕ ಸಯೀದ್ ಆಲಿ ಶಾ ಗಿಲಾನಿ ಅವರ ಪಾತ್ರದ ಬಗ್ಗೆ ಎನ್‌ಐಎ ತನಿಖೆ ನಡೆಸುತ್ತಿದೆ.

ಈ ಮಧ್ಯೆ, ಹುರಿಯತ್ ಕಾನ್ಫರೆನ್ಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ನಯೀಂ ಖಾನ್‌ನನ್ನು ಅಮಾನತ್ತುಗೊಳಿಸಲಾಗಿದೆ.

****************

ಪನಾಮ ದಾಖಲಗಳ ವಿವಾದದಿಂದಾಗಿ, ಪಾಕಿಸ್ತಾನದಲ್ಲಿ ರಾಜಕೀಯ ಅಪಾಯ ಉಂಟಾಗಲ್ಲಿದ್ದು, ಕೆಲ ನೀತಿ ಅನಿಶ್ಚಿತತೆ ಎದುರಾಗಲಿದೆ ಎಂದು ವಿಶ್ವ ಬ್ಯಾಂಕ್ ಪಾಕಿಸ್ತಾನವನ್ನು ಎಚ್ಚರಿಸಿದೆ.

ನಿನ್ನೆ ಪಾಕಿಸ್ತಾನ ಅಭಿವೃದ್ಧಿ ಪರಿಷ್ಕರಣ ಎಂಬ ವರದಿಯನ್ನು ಬಿಡುಗಡೆ ಮಾಡಿದ ವಿಶ್ವಬ್ಯಾಂಕ್, ಪಾಕಿಸ್ತಾನ ರಾಜಕೀಯ ಅರಾಜಕತೆ, ಭಯೋತ್ಪಾದನೆ ಮತ್ತು ಪ್ರಾಕೃತಿಕ ವಿಕೋಪವನ್ನು ಎದುರಿಸುವ ಸಾಧ್ಯತೆ ಹೆಚ್ಚಾಗಿದೆ ಎಂದಿದೆ. ಇದು ಮುಂಬರುವ ರಾಷ್ಟ್ರೀಯ ಚುನಾವಣೆ ಸುಧಾರಣೆ ವೇಗ ಮತ್ತು ಸ್ಥೂಲ ದೃಷ್ಟಿಕೋನದ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದಿದೆ.

ವಿಶ್ವಬ್ಯಾಂಕ್ ಪ್ರಕಾರ ಈ ದ್ವೈವಾರ್ಷಿಕ ವರದಿ ಸದ್ಯದ ಅಭಿವೃದ್ಧಿಯಲ್ಲಿ ಉಂಟಾಗುವ ಬೆಳವಣಿಗೆಗಳು ಮತ್ತು ಅಪಾಯಗಳನ್ನು ಮುಂಚಿತವಾಗಿ ಗ್ರಹಿಸುತ್ತದೆ.

ಈ ಹಿಂದೆ ಕೂಡ ಅನೇಕ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಪನಾಮ ದಾಖಲೆಗಳು ಪಾಕಿಸ್ತಾನದ ಅಭಿವೃದ್ಧಿಯ ಮೇಲೆ ಭಾರಿ ಪರಿಣಾಮ ಬೀರಲಿವೆ ಎಂದು ಎಚ್ಚರಿಸಿದ್ದವು.

****************

ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳನ್ನು ಹತ್ತಿಕ್ಕುತ್ತಿರವ ಸರ್ಕಾರದ ಕ್ರಮಕ್ಕೆ ಪಾಕಿಸ್ತಾನದ ತೆಹ್ರಿಕ್ ಇ ಇನ್ಸಾಫ್ ಪಕ್ಷದ ಮುಖ್ಯಸ್ಥ ಇಮ್ರಾನ್ ಖಾನ್ ಎಚ್ಚರಿಕೆ ನೀಡಿದ್ದಾರೆ. ಯಾವುದೇ ರೀತಿಯಲ್ಲೂ ಸರ್ಕಾರ ಜನರ ದನಿಯನ್ನು ದಮನ ಮಾಡುವುದನ್ನು ತಮ್ಮ ಪಕ್ಷ ಸಹಿಸುವುದಿಲ್ಲ ಎಂದಿದ್ದಾರೆ. ಶುಕ್ರವಾರ ಕ್ವೆಟ್ಟಾದ ಅಯೂಬ್ ಕ್ರೀಡಾಂಗಣದಲ್ಲಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಪ್ರಧಾನಮಂತ್ರಿ ನವಾಜ್ ಷರೀಫ್ ಅವರು ತನಿಖಾ ಸಂಸ್ಥೆಗಳಿಂದ ಮಾಧ್ಯಮವನ್ನು ನಿರ್ಬಂಧಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

****************

ನೂತನವಾಗಿ ಪುನರಾಯ್ಕೆಯಾಗಿರುವ ಇರಾನ್ ಅಧ್ಯಕ್ಷ ಹಸನ್ ರೌಹಾನಿ ವಿಶ್ವದ ಜೊತೆ ಶಾಂತಿಯುತ ಸಂಬಂಧ ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಅಧ್ಯಕ್ಷರಾಗಿ ಆಯ್ಕೆಯಾದ ನಂತರದ ಮೊದಲ ಟೆಲಿವಿಷನ್ ಸಂದರ್ಶನದಲ್ಲಿ ಅವರು, ತಮ್ಮ ದೇಶ ಭಯೋತ್ಪಾದನೆಯನ್ನು ಖಂಡಿಸುತ್ತದೆ ಮತ್ತು ಸೇನಾ ಉದ್ದೇಶಕ್ಕೆ ಮಾತ್ರವೇ ಕ್ಷಿಪಣಿಯನ್ನು ಬಳಸಲಾಗುತ್ತದೆ ಎಂದಿದ್ದಾರೆ. ಇರಾನಿಯನ್ನರು ವಿಶ್ವದ ಜೊತೆಯಲ್ಲಿ ಸಂಬಂಧ ಹೊಂದುವ ಮತ್ತು ತೀವ್ರವಾದಿತನ ಹಾಗೂ ಹಿಂಸೆಯನ್ನು ತಿರಸ್ಕರಿಸುವ ಹಾದಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

****************

ಭಾರತದ ಶಾಂತಿ ಪಾಲಕ ಪಡೆಯ ಇಬ್ಬರು ಯೋಧರಿಗೆ ಪ್ರತಿಷ್ಠಿತ ವಿಶ್ವ ಸಂಸ್ಥೆ ಪದಕವನ್ನು ನೀಡಿ ಗೌರವಿಸಲಾಗಿದೆ.

ಧೈರ್ಯ, ಸಾಹಸ ಮೆರೆದು ಕರ್ತವ್ಯ ನಿಭಾಯಿಸಿದ ನಿಷ್ಠೆಗಾಗಿ ವಿಶ್ವದ 117 ಸೇನಾಪಡೆಗಳು, ಪೊಲೀಸ ಮತ್ತು ನಾಗರೀಕ ಸಿಬ್ಬಂದಿಗಳಿಗೆ, ವಿಶ್ವ ಸಂಸ್ಥೆ ಮರಣೋತ್ತರ ಪದಕ ನೀಡುತ್ತಿದೆ.

ಭಾರತದ ರೈಫಲ್ ಮ್ಯಾನ್ ಬ್ರಿಜೇಶ್ ಥಾಪಾ ಆಫ್ರಿಕಾದ ಕಾಂಗೋದಲ್ಲಿ ವಿಶ್ವ ಸಂಸ್ಥೆಯ ಶಾಂತಿ ಸ್ಥಾಪನೆ ಯೋಜನೆ ಪಡೆಯ ಸದಸ್ಯರಾಗಿದ್ದು, ವೀರ ಮರಣವನ್ನು ಅಪ್ಪಿದ್ದರು. ಮತ್ತೋರ್ವ ಭಾರತೀಯ ಯೋಧ ರವಿಕುಮಾರ್, ವಿಶ್ವ ಸಂಸ್ಥೆಯ ಮಧ್ಯಂತರ ಪಡೆಯ ಸದಸ್ಯನಾಗಿದ್ದು, ಲೆಬನಾನ್‌ನಲ್ಲಿ ಕಾರ್ಯನಿರ್ವಹಿಸಿದ್ದರು.

****************

ರಾಜೀವ್‌ಗಾಂಧಿ ಅವರ 26 ನೇ ಪುಣ್ಯತಿಥಿಯಾದ ಇಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ  ಗೌರವ ನಮನ ಸಲ್ಲಿಸಿದ್ದಾರೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ಉಪರಾಷ್ಟ್ರಪತಿ ಹಮೀದ್ ಅನ್ಸಾರಿ, ಮಾಜಿ ಪ್ರಧಾನಮಂತ್ರಿ ಮನ್‌ಮೋಹನ್ ಸಿಂಗ್, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ,  ಪಕ್ಷದ ಉಪಾಧ್ಯಕ್ಷ ರಾಹುಲ್ ಗಾಂಧಿ, ಪುತ್ರಿ ಪ್ರಿಯಾಂಕ ಗಾಂಧಿ ಮತ್ತು ಅಳಿಯ ರಾಬರ್ಟ್ ವಾದ್ರಾ ಹಾಗೂ ಪಕ್ಷದ ಹಲವು ನಾಯಕರು ನವದೆಹಲಿಯ ವೀರ್‌ಭೂಮಿಯಲ್ಲಿರುವ ರಾಜೀವ್ ಗಾಂಧಿ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು. ಭಾರತದ 6 ನೇ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ ರಾಜೀವ್ ಗಾಂಧಿ  1991 ರ ಮೇ  21 ರಂದು ತಮಿಳುನಾಡಿನ ಶ್ರೀಪೆರಂಬದೂರಿನಲ್ಲಿ ಕೈಗೊಂಡ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹತ್ಯೆಗೀಡಾಗಿದ್ದರು.

****************

ನಿನ್ನೆ ರಾತ್ರಿ ನಡೆದ ಗುಂಡಿನ ಕಾಳಗದ ನಂತರ ಜಮ್ಮು –ಕಾಶ್ಮೀರದ ಕುಪ್ವಾರ ಪ್ರದೇಶದಲ್ಲಿ ಭಾರತೀಯ ಸೇನೆ ಉಗ್ರರಿಗಾಗಿ ತೀವ್ರ ಶೋಧ ನಡೆಸಿದೆ. ಗಡಿಯಾಚೆಯಿಂದ ಉಗ್ರರ ನುಸುಳುವಿಕೆಯನ್ನು ಸೈನಿಕರು ತಡೆಯಲು ಯತ್ನಿಸಿದ ನಂತರ ಗುಂಡಿನ ಕಾಳಗ ಆರಂಭವಾಗಿತ್ತು. ಕೆಲ ಉಗ್ರರು ತಲೆಮರೆಸಿಕೊಂಡಿರುವ ಶಂಕೆ ಇದ್ದು, ಇವರಿಗಾಗಿ ಹುಡುಕಾಟ ನಡೆದಿದೆ ಎನ್ನಲಾಗಿದೆ.

ದೇಶದೊಳಗೆ ನುಗ್ಗಲು ಯತ್ನಿಸಿದ ಅತಿಕ್ರಮಣಕಾರರನ್ನು ಹಿಮ್ಮೆಟ್ಟುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ರಕ್ಷಣಾ ವಕ್ತಾರರು ಆಕಾಶವಾಣಿಗೆ ತಿಳಿಸಿದ್ದಾರೆ.

****************

ಅಮೇರಿಕಾದ ಅಂತರಿಕ್ಷ ವಿಜ್ಞಾನ ಸಂಸ್ಥೆ, ನಾಸಾ, ತಾನು ಅನ್ವೇಷಿಸಿದ ಎರಡು ಜೀವಾಣುಗಳಿಗೆ ಭಾರತದ ಪ್ರಸಿದ್ಧ ಅಣು ವಿಜ್ಞಾನಿ ಮತ್ತು ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಂ ಅವರ ಹೆಸರನ್ನಿಟ್ಟು ಗೌರವಿಸಿದೆ.

ನಾಸಾದ ಜೆಟ್ ಪ್ರೊಪ್ಲಷ್‌ನ್ ಪ್ರಯೋಗಾಲಯದ ಸಂಶೋಧಕರು ತಮ್ಮ ಅಂತರ್ ಗ್ರಹ ಯಾತ್ರೆ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಅಂತರಿಕ್ಷ ಕೇಂದ್ರ ಐಎಸ್‌ಎಸ್ ನ ಫಿಲ್ಟರ್ ಮೇಲಿದ್ದ ಬ್ಯಾಕ್ಟೇರಿಯಾ ರೂಪದಲ್ಲಿನ ಎರಡು ಜೀವಾಣುಗಳಿಗೆ ಸೋಲಿಬೆಸಿಲಿಸ್ ಕಲಮಿ ಎಂದು ನಾಕರಣ ಮಾಡಿದ್ದಾರೆ.

****************

ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ ಒತ್ತು ನೀಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಈಶಾನ್ಯ ರಾಜ್ಯಗಳ ನಾಗರಿಕರು ಮಹಾನ್ ಪ್ರತಿಭಾವಂತರಾಗಿದ್ದು, ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರ ಆ ಭಾಗದತ್ತ ಹೆಚ್ಚು ಗಮನ ನೀಡಿದ್ದರಿಂದ ಅಲ್ಲಿ ಮಹತ್ತರ ಬದಲಾವಣೆಯಾಗಿದೆ ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

ನಾಗರಿಕರೊಬ್ಬರ ಟ್ವೀಟ್ ಪ್ರತಿಕ್ರಿಯೆಗೆ ಉತ್ತರಿಸಿರುವ ಪ್ರಧಾನಿ ಅಭಿವೃದ್ಧಿ ಕಾರ್ಯಕ್ರಮಗಳು ಜನರ ಒಳಗೊಳ್ಳುವಿಕೆಯಿಂದ ಮಾತ್ರ ಸಾಧ್ಯ. ಬದಲಾವಣೆಗೆ ಜನರ ಬೆಂಬಲ ಅತ್ಯಗತ್ಯ ಎಂದು ತಿಳಿಸಿದ್ದಾರೆ.

****************

ಕಡಿಮೆ ದರದಲ್ಲಿ ಔಷಧ ನೀಡುವ ಮತ್ತು ಚಿಕಿತ್ಸೆ ಒದಗಿಸುವ ಯೋಜನೆ ಅಡಿ ದೇಶದ 84 ಔಷಧ ಮಳಿಗೆಗಳಲ್ಲಿ ಇದುವರೆಗೆ ಸುಮಾರು 19 ಲಕ್ಷ ಮೌಲ್ಯದ ಔಷಧ ವಿತರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ಹೇಳಿದ್ದಾರೆ.

ಆಕಾಶವಾಣಿಗೆ ನೀಡಿದ ಸಂದರ್ಶನದಲ್ಲಿ ಅವರು ದೇಶದ ಜಿ.ಡಿ.ಪಿ.ಯಲ್ಲಿ ಶೇಕಡ 2.5ರಷ್ಟು ಹಣವನ್ನು ಆರೋಗ್ಯ ವಲಯದ ಮೇಲೆ ವಿನಿಯೋಗಿಸಲಾಗಿದೆ ಎಂದರು.

ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಸೀಟುಗಳ ಸಂಖ್ಯೆಯನ್ನು 5 ಸಾವಿರದಷ್ಟು ಏರಿಸಲಾಗಿದೆ.

ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಎಲ್ಲ ಪ್ರಯತ್ನ ಮಾಡುತ್ತಿದೆ ಎಂದು ತಿಳಿಸಿದರು.

***************

ಕಟಕ್‌ನ ಭಾರಾಮತಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಫೆಡರೇಷನ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೆಣಸಲಿವೆ.

ಸಂಜೆ 6–55 ರಿಂದ 8–50ರವರೆಗೆ ಪಂದ್ಯದ ನೇರ ವೀಕ್ಷಕ ವಿವರಣೆಯನ್ನು ಆಕಾಶವಾಣಿ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಪ್ರಸಾರ ಮಾಡಲಿದೆ.

ರಾಜಧಾನಿ ಮತ್ತು ಎಫ್‌ಎಂ ರೈನ್‌ಬೋ ಚಾನಲ್‌ಗಳಲ್ಲಿ ಈ ವೀಕ್ಷಕ ವಿವರಣೆ ಕೇಳಬಹುದಾಗಿದೆ.

********************

ಹೈದ್ರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿಂದು ಐಪಿಎಲ್ ಟಿ–20 ಕ್ರಿಕೆಟ್ ಫೈನಲ್ ಪಂದ್ಯ ನಡೆಯಲಿದ್ದು ಮುಂಬೈ ಇಂಡಿಯನ್ಸ್ ಮತ್ತು ರೈಸಿಂಗ್ ಪುಣೆ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಇಂದು ರಾತ್ರಿ 8 ಗಂಟೆಗೆ ನಿಗದಿಯಾಗಿದೆ. ಪ್ರಸಕ್ತ ಐಪಿಎಲ್ ಪಂದ್ಯದಲ್ಲಿ ಈ ಎರಡೂ ತಂಡಗಳು 3 ಬಾರಿ ಮುಖಾಮುಖಿಯಾಗಿದ್ದು ಮೂರು ಪಂದ್ಯಗಳಲ್ಲಿ ಪುಣೆ ತಂಡ ಜಯಗಳಿಸಿದೆ. ಐಪಿಎಲ್‌ಪಂದ್ಯಗಳಲ್ಲಿ 4ನೇ ಬಾರಿಗೆ ಮುಂಬೈ ಇಂಡಿಯನ್ಸ್ ತಂಡ ಫೈನಲ್‌ಗೆ ಲಗ್ಗೆ ಇಟ್ಟಿದ್ದು ಗೆಲ್ಲುವ ವಿಶ್ವಾಸದಲ್ಲಿದೆ. ರೋಹಿತ್ ಶರ್ಮಾ ನಾಯಕತ್ವದ ಮುಂಬಯ ತಂಡ ಈ ಸರಣಿಯಲ್ಲಿ 14 ಪಂದ್ಯಗಳಲ್ಲಿ 10 ರಲ್ಲಿ ಜಯಗಳಿಸಿದೆ.

*******************

*********ಮುಕ್ತಾಯ *********